ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 02.08.2023.

**ಪಾಟೀ ಸವಾಲು:** 4 ನೇ ಪ್ರತಿವಾದಿ ಪರ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎದು ನನಗೆ ಗೊತ್ತಿಲ್ಲಾ ಎಂದರೆ ಸರಿ, ಆದರೆ ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಗೆ 1 ನೇ ವಾದಿ ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ

ತಂಗಿಯನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳನ್ನು ಯಾರು ಬರೆದಿರುತ್ತಾರೆ ಎಂದು ಕೂಡಾ ನನಗೆ ಗೊತ್ತಿಲ್ಲಾ. ನನಗೆ ಸಾಕ್ಷಿ ನುಡಿಯಲು ವಿನಂತಿಸಿಕೊಂಡಿದ್ದರ ಮೇರೆಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸಾಕ್ಷಿ ನನ್ನ ತಂಗಿ ಕೊಟ್ಟಿದ್ದು, ಆಸ್ತಿ ಸಂಬಂಧ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಂಗತಿಗಳ ಸುಳ್ಳು ಇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 1 ರಿಂದ 3 ಮತ್ತು 5 ನೇ ಪ್ರತಿವಾದಿಯವರಿಂದ ಪಾಟೀ ಸವಾಲು ಏನು ಇರುವುದಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 02.08.2023.

**ಪಾಟೀ ಸವಾಲು:** 4 ನೇ ಪ್ರತಿವಾದಿ ಪರ ವಕೀಲರಿಂದ:

ಪ್ರತಿವಾದಿ ಕುಟುಂಬ ನನಗೆ ಸುಮಾರು ನಾನು ಚಿಕ್ಕವನು ಇರುವಾಗನಿಂದಲೂ ಪರಿಚಯ ಇರುತ್ತದೆ. ಸಾವಳಗಿ ಮತ್ತು ಕರಹರಿ ಗ್ರಾಮ ಸುಮಾರು 3 ಕಿ.ಮೀ. ಅಂತರ ಇದೆ. ನನ್ನ ತಾಯಿಯ ಸೋದರ ಮಾವನ ಮಗಳನ್ನು 1 ನೇ ಪ್ರತಿವಾದಿ ಕುಟುಂಬಕ್ಕೆ ಮದುವೆ

ಮಾಡಿಕೊಟ್ಟಿರುವ ಕಾರಣ ನನಗೆ ಪರಿಚಯ ಇರುತ್ತದೆ. ನನ್ನ ತಂಗಿಯ ಮಗಳನ್ನು 1 ನೇ ಪ್ರತಿವಾದಿಗೆ ಕೊಟ್ಟು ಮದುವೆ ಮಾಡಿರುತ್ತೇವೆ ಎಂದು ಹೇಳಿದ ಸಂಗತಿ ನಿಜ ಇರುತ್ತದೆ. ಪ್ರತಿವಾದಿಯರ ಕುಟುಂಬಕ್ಕೆ ಸುಮಾರು 20 ಎಕರೆ ಜಮೀನು ಇರುತ್ತದೆ. ಸದರಿ ಕುಟುಂಬದ ಜಮೀನನ್ನು ಇವತ್ತಿಗೂ ಕೂಡಾ ಯಾರಿಗೂ ಮಾರಾಟ ಮಾಡಿರುವುದಿಲ್ಲ.

ಪ್ರತಿವಾದಿಯರ ಕುಟುಂಬಕ್ಕೆ ಕರಹರಿ ಗ್ರಾಮದಲ್ಲಿ ಸುಮಾರು 2 ಮನೆಗಳು ಇರುತ್ತವೆ. ಸದರಿ 2 ಮನೆಗಳ ಪೈಕಿ ಒಂದು ಮನೆಯಲ್ಲಿ 3 ನೇ ಪ್ರತಿವಾದಿ ಇದ್ದು, ಇನ್ನೊಂದು ಮನೆಯಲ್ಲಿ 4 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ. ಸುಮಾರು 20 ವರ್ಷಗಳಿಂದ 4 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬಂದ ಮನೆಯನ್ನು ಖರೀದಿ ಮಾಡಿ, ಅವರೇ ವಾಸವಿರುತ್ತಾರೆ ಎಂದರೆ ಸರಿಯಲ್ಲ. ನನಗೆ ವಾದಿ ಪ್ರತಿವಾದಿಯರ ಕುಟುಂಬ ಮೊದಲಿನಿಂದಲೂ ಪರಿಚಯ ಇರುತ್ತದೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸುಮಾರು 20 ಎಕರೆ ಮೇಲಿರುವ ಜಮೀನಿನ ಎಲ್ಲಾ ಸರ್ವೆ ನಂಬರಗಳು ನನಗೆ ಗೊತ್ತಿಲ್ಲಾ.

ದಾವಾ ಸ್ವತ್ತುಗಳು ಕರಹರಿ ಗ್ರಾಮದ ಪಶ್ಚಿಮ ದಿಕ್ಕಿಗೆ ಇರುತ್ತವೆ, ಅವುಗಳ ಸರ್ವೆ ನಂಬರಗಳು ನನಗೆ ಗೊತ್ತಿಲ್ಲಾ, ಅದೇ ರೀತಿ ಉಳಿದ ಸರ್ವೆ ನಂಬರಗಳು ಜಮೀನು ಉತ್ತರಕ್ಕೆ ಇವೆ, ಅವು ಎಷ್ಟು ಎಕರೆ ಇವೆ ಎಂದು ಗೊತ್ತಿಲ್ಲಾ. ನಾನು ದಾವಾ ಸ್ವತ್ತುಗಳನ್ನು ಯಾವತ್ತು ನೋಡದೇ ಇದ್ದರೂ ಮತ್ತು ಅವುಗಳ ಬಗ್ಗೆ ನನಗೆ ಗೊತ್ತಿಲ್ಲದೇ ಇದ್ದರೂ, 1 ನೇ ವಾದಿ ಶರಣಬಸಪ್ಪನಿಗೆ ಸಹಾಯ ಮಾಡುವ ಉದ್ದೇಶದಿಂದ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಕ್ಕಳಾದ ಶರಣಮ್ಮ ಇವಳು ಕಲಬುರಗಿಯ ಕಮಲನಗರದಲ್ಲಿ ಇರುತ್ತಾರೆ, ಅವರ ಮಗಳಾದ ಸುಜಾತ ರವರನ್ನು ಸುಮಾರು 10 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿರುತ್ತಾರೆ. ಆ ಸಮಯದಲ್ಲಿ 1 ನೇ ವಾದಿ ಕಲಬುರಗಿಯಲ್ಲಿ ಇರುತ್ತಿದ್ದ. ಮದುವೆ ಕಾಲಕ್ಕೆ 1 ನೇ ವಾದಿ ಕಲಬುರಗಿಯಲ್ಲಿ ಇರುತ್ತಿದ್ದ, ಅವರ ತಾಯಿ ವಿಮಲಾಬಾಯಿ ಇವರು ಕರಹರಿ ಗ್ರಾಮದಲ್ಲಿ ಇರುತ್ತಿದ್ದರು. 2 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ಸುಮಾರು 35 ವರ್ಷಗಳಿಂದ 1 ನೇ ವಾದಿ ಹುಟ್ಟಿದ ನಂತರ 2 ನೇ ವಾದಿ 3 ನೇ ಪ್ರತಿವಾದಿಯರನ್ನು ಬಿಟ್ಟು ಕಲಬುರಗಿಯಲ್ಲಿ ತನ್ನ ಮಗನನ್ನು ಕರೆದುಕೊಂಡು ವಾಸವಿರುತ್ತಿದ್ದಳು ಎಂದರೆ ಸರಿಯಲ್ಲ.

ಅದೇ ರೀತಿ 2 ನೇ ವಾದಿ 3 ನೇ ಪ್ರತಿವಾದಿ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಇವತ್ತಿನವರೆಗೂ ಆಳಂದ ನ್ಯಾಯಾಲಯದಲ್ಲಿ 2 ನೇ ವಾದಿಯ ಜೀವನಾಂಶ ಅರ್ಜಿ ಚಾಲ್ಲಿಯಲ್ಲಿ ಇದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸಂಗತಿ ಎಲ್ಲವೂ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ 1 ಮತ್ತು 2 ನೇ ವಾದಿ ಹಾಗೂ 1 ನೇ ವಾದಿ ಹೆಂಡತಿ ಕಲಬುರಗಿಯಲ್ಲಿಯೇ ಇರುತ್ತಾರೆ ಎಂದರೆ ಸರಿಯಲ್ಲ. ಸುಮಾರು 25 ವರ್ಷಗಳಿಂದ ವಾದಿಯರ ಮತ್ತು ಪ್ರತಿವಾದಿಯರ ಕುಟುಂಬದ ಮಧ್ಯ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಸುಮಾರು 10 ವರ್ಷಗಳಿಂದ ದಾವಾ ಸ್ವತ್ತಿನ ಬೆಲೆ ಪ್ರತಿ ವರ್ಷಕ್ಕೆ ಸುಮಾರು 4 ಲಕ್ಷ ಇರುತ್ತವೆ. ಆ ಬಗ್ಗೆ ದಾಖಲೆಯನ್ನು ನೋಡಿಲ್ಲಾ. ದಾವಾ ಸ್ವತ್ತುಗಳ ಪೈಕಿ ಯಾವ ಸರ್ವೆ

ನಂಬರಗಳು ಮುಳಗಡೆಯಾಗಿವೆ ಹಾಗೂ ಯಾವ ಸರ್ವೆ ನಂಬರಗಳು ನೀರಾವರಿ ಜಮೀನುಗಳು ಇವೆ ಎಂದು ನನಗೆ ಗೊತ್ತಿಲ್ಲಾ. ಅದೇ ರೀತಿ ಯಾವ ಸರ್ವೆ ನಂಬರದಲ್ಲಿ ಬಾವಿ ಇದೆ ಎಂದು ನನಗೆ ಗೊತ್ತಿಲ್ಲಾ ಎಂದರೆ ಸರಿ. ದಾವಾ ಸ್ವತ್ತುಗಳಿಂದ 8-10 ಲಕ್ಷ ರೂ ಉತ್ಪನ್ನ ಇದೆ ಎಂದು ಹೇಳಿದ್ದು, ಯಾವ ಆಧಾರದ ಮೇಲೆ ಹಾಗೂ ಎಷ್ಟು ವರ್ಷದ ದಾಖಲೆ ನೋಡಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆ ನೋಡಿಲ್ಲಾ ಆದರೆ ಉತ್ಪನ್ನ ಇದೆ ಎಂದು ನುಡಿಯತ್ತಾರೆ.

ವಾದಿಯರ ಮೂಲ ಪುರುಷ ಸಾಯಿಬಣ್ಣ ಎಂದರೆ ಸರಿ. ಸದರಿ ಸಾಯಿಬಣ್ಣ ತಮ್ಮ ಇಬ್ಬರು ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿಯರಿಗೆ 2000 ನೇ ಸಾಲಿನಲ್ಲಿ ಹಂಚಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ಸರ್ವೆ ನಂಬರ 302/2 ರ 11 ಎಕರೆ 23 ಗುಂಟೆ ಜಮೀನನ್ನು 4 ನೇ ಪ್ರತಿವಾದಿಗೆ ಹಂಚಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂಬರ 179 ರಲ್ಲಿ 3 ಎಕರೆ 27 ಗುಂಟೆ ಜಮೀನು, ಸರ್ವೆ ನಂ. 170 ರಲ್ಲಿ 1 ಎಕರೆ 35 ಗಂಟೆ ಜಮೀನು, ಸರ್ವೆ ನಂ.173 ರಲ್ಲಿ 2 ಎಕರೆ 28 ಗುಂಟೆ ಜಮೀನು ಹಾಗೂ ಸರ್ವೆ ನಂ.8/6 ರಲ್ಲಿ 25 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ಹಂಚಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಅದೇ ರೀತಿ ಕರಹರಿ ಗ್ರಾಮದಲ್ಲಿರುವ ಮನೆಯಲ್ಲಿ 3 ಮತ್ತು 4 ನೇ ಪ್ರತಿವಾದಿಯರಿಗೆ ತಲಾ ಅರ್ಧ ಹಂಚಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಸುಮಾರು 1 ವರ್ಷದ ನಂತರ 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ತನಗೆ ಬಂದ ಮನೆಯನ್ನು ಮಾರಾಟ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಇದೆಲ್ಲಾ ನನಗೆ ಗೊತ್ತಿದ್ದರೂ ಕೂಡಾ 1 ನೇ

ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2000 ನೇ ಸಾಲಿನಿಂದ 3 ಮತ್ತು 4 ನೇ ಪ್ರತಿವಾದಿಯರು ತಮ್ಮ-ತಮ್ಮ ಪಾಲಿಗೆ ಬಂದ ಜಮೀನುಗಳನ್ನು ತಾವು ಸಾಗುವಳಿ ಮಾಡಿಕೊಂಡು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿ 3 ನೇ ಪ್ರತಿವಾದಿಯನ್ನು ಬಿಟ್ಟು ಬಂದ ನಂತರ 3 ನೇ ಪ್ರತಿವಾದಿ ಲಲಿತಾಬಾಯಿ ಎಂಬುವವರನ್ನು 3 ನೇ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲಲಿತಾಬಾಯಿ 2000 ನೇ ಇಸ್ವಿಯಿಂದ 3 ನೇ ಪ್ರತಿವಾದಿಯ ಜೊತೆ ಅವರ ಮನೆಯಲ್ಲಿ ಕೂಡಿ ಬಾಳ್ವೆ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಸದರಿ ಲಲಿತಾಬಾಯಿಗೆ ಹುಟ್ಟಿದ ಮಕ್ಕಳ ಮದುವೆಯನ್ನು ತಮ್ಮ ಪಾಲಿಗೆ ಬಂದ ಜಮೀನುಗಳ ಉತ್ಪನ್ನದಿಂದ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು ಇರುತ್ತದೆ.

(ಈ ಹಂತದಲ್ಲಿ ಭೋಜನ ವಿರಾಮ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.)

ಸಾಕ್ಷಿಯನ್ನು ಮದ್ಯಾಹ್ನ 3.30 ಗಂಟೆಗೆ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.
ದಿನಾಂಕಃ 02.08.2023.

**<u>ಮುಂದುವರೆದ ಪಾಟೀ ಸವಾಲುಃ</u>** <u>4 ನೇ ಪ್ರತಿವಾದಿ ಪರ ವಕೀಲರಿಂದಃ</u>

ಸಾಕ್ಷಿಗೆ ದಿಃ 15.04.2000 ಸಾಲಿನ 2 ಪಾಲುಗಾರಿಕೆ ಪತ್ರಗಳನ್ನು ತೋರಿಸುತ್ತಿದ್ದು, ಅವು ನಮ್ಮ ಸಮಕ್ಷಮ ಆಗಿಲ್ಲಾ ಅವು ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಗೆ ಜ್ಞಾಪನಾ ಪತ್ರಗಳು ಆದ ಬಗ್ಗೆ ನನಗೆ ವಾದಿಯರು ಹೇಳಿದ್ದರೂ ಕುಡಾ ಅವು

ನನಗೆ ಗೊತ್ತಿಲ್ಲಾ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಸದರಿ ಪಾಲುಗಾರಿಕೆ ಪತ್ರಗಳು ಆದ ಬಗ್ಗೆ ಗೊತ್ತಿದ್ದರೂ ಕೂಡಾ 1ನೇ ವಾದಿ ನನ್ನ ಅಕ್ಕನ ಮಗಳ ಗಂಡನಾಗಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 1 ರಿಂದ 3 ಮತ್ತು 5ನೇ ಪ್ರತಿವಾದಿಯರಿಂದ ಪಾಟೀ ಸವಾಲು ಏನು ಇರುವುದಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**